ಆ) ಕುಂದಾಪುರ ತಾಲ್ಲೂಕಿನ ಪ್ರೌಢಶಾಲೆಗಳಲ್ಲಿ 41. ಭೋದಕ ಹುದ್ದೆ ಹಾಗೂ 3 ಬೋಧಕೇತರ ಹುದ್ದೆಗಳು ಹಾಗೂ ಉಡುಪಿ ತಾಲ್ಲೂಕಿನ ಪ್ರೌಢ ಶಾಲೆಗಳಲ್ಲಿ 18 ಬೋಧಕ ಹಾಗೂ 10 ಬೋಧಕೇತರ ಹುದ್ದೆಗಳು ಖಾಲಿ ಇವೆ.

ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಎರಡೂ ತಾಲ್ಲೂಕುಗಳಲ್ಲಿ 74 ಬೋಧಕ ಹುದ್ದೆಗಳು ಹಾಗೂ 13 ಬೋಧಕೇತರ ಹುದ್ದೆಗಳು ಖಾಲಿ ಇವೆ.

ಇ) ಬೋಧಕ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗವು ಪ್ರಕಟಣೆ ಹೊರಡಿಸಿದ್ದು ಅವರಿಂದ ಅಂತಿಮ ಆಯ್ಕೆಪಟ್ಟಿ ಬಂದ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಪ್ರೌಢಶಿಕ್ಷಣ ವಿಭಾಗದಲ್ಲಿ ಖಾಲಿ ಇರುವ ಭೋದಕ ಹುದ್ದೆಗಳನ್ನು ತುಂಬುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರೂಪಿಸುವ ವಿಷಯವು ಅಂತಿಮ ಹಂತದಲ್ಲಿದ್ದು ಅದನ್ನು ಹೊರಡಿಸಿದ ಕೂಡಲೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಬೋಧಕೇತರ ಹುದ್ದೆಗಳನ್ನು ತುಂಬುವ ಬಗ್ಗೆ ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದು ಈ ಆದೇಶವನ್ನು ಸಡಿಲಿಸಿದ ಕೂಡಲೇ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

**ರಾಜ್ಯದಲ್ಲಿರುವ ಸಂಚಾರಿ ನೇತ್ರ ಆಸ್ಪತ್ರೆಗಳು.**

2250 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿರುವ ಸಂಚಾರಿ ನೇತ್ರ ಆಸ್ಪತ್ರೆಗಳ ಸಂಖ್ಯೆ ಎಷ್ಟು?*

*ಆ) ಈ ಆಸ್ಪತ್ರೆಗಳಲ್ಲಿ ಸರ್ಕಾರ ಹಾಗೂ ಖಾಸಗಿಯವರು ನಡೆಸುತ್ತಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?*

*ಇ) ಬೆಂಗಳೂರಿನಲ್ಲಿರುವ ಸಂಚಾರಿ ನೇತ್ರ ಆಸ್ಪತ್ರೆಗಳ ಸಂಖ್ಯೆ ಎಷ್ಟು?*

*ಈ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಚಾರಿ ನೇತ್ರ ಆಸ್ಪತ್ರೆ ಇರುವುದೇ?*

*ಉ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಚಾರಿ ನೇತ್ರ ಆಸ್ಪತ್ರೆಗಳನ್ನು ಸ್ಥಾಪಿಸಲು ತೆಗೆದುಕೊಂಡಿರುವ ಕ್ರಮ.*

ಡಾ|| ಹೆಚ್. ಸಿ. ಮಹದೇವಪ್ಪ ( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ 26 ಸಂಚಾರಿ ನೇತ್ರ ಆಸ್ಪತ್ರೆಗಳಿವೆ.

ಆ) ಈ ಆಸ್ಪತ್ರೆಗಳಲ್ಲಿ ಸರ್ಕಾರದ ವತಿಯಿಂದ 21 ಮತ್ತು ಖಾಸಗಿಯವರಿಂದ 5 ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿರುವುವು.

ಇ) ಬೆಂಗಳೂರಿನಲ್ಲಿ 4 ಸಂಚಾರಿ ನೇತ್ರ ಆಸ್ಪತ್ರೆಗಳಿವೆ. (1 ಆಸ್ಪತ್ರೆ ಸರ್ಕಾರವೂ ಹಾಗೂ ಉಳಿದ 3 ಆಸ್ಪತ್ರೆಗಳು ಖಾಸಗಿಯವರಿಂದ ಕಾರ್ಯ ನಿರ್ವಹಿಸುತ್ತಿವೆ)

ಈ) ಹೌದು. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಚಾರಿ ನೇತ್ರ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.

ಉ) ಅನ್ವಯಿಸುವುದಿಲ್ಲ.

**ಅಕ್ಕಿತಿಮ್ಮನ ಹಳ್ಳಿಯ ಕ್ರೀಡಾಂಗಣ ನಿರ್ಮಾಣದ ಹಂತದಲ್ಲಿ ಕುಸಿದ ಬಗ್ಗೆ**

2251 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಅಕ್ಕಿ ತಿಮ್ಮನಹಳ್ಳಿಯ ಬಳಿ ನಿರ್ಮಿಸುತ್ತಿರುವ ಕ್ರೀಡಾಂಗಣ ಇತ್ತೀಚಿನ ಮಳೆಗೆ ಕುಸಿದು ಬಿದ್ದಿದ್ದು ನಿಜವಲ್ಲವೇ?*

*ಆ) ಇದರಿಂದ ಎಷ್ಟು ಜನರು ಮೃತಪಟ್ಟರು?*

*ಇ) ಇದಕ್ಕೆ ಕಾರಣಗಳೇನು?*

*ಈ) ಈ ಕ್ರೀಡಾಂಗಣದ ಕೆಲಸ ಕಳಪೆಯಾಗಿರುವುದು ಕುಸಿತಕ್ಕೆ ಕಾರಣವೇ?*

*ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯ ಇದರಿಂದ ಕುಂಠಿತಗೊಳ್ಳವುದಿಲ್ಲವೇ?*

*ಊ) ಈ ಉದ್ದೇಶಿತ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?*

ಶ್ರೀ ಅಜಯ ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) 26.8.95ರಂದು ಕ್ರೀಡಾಂಗಣದ ಕಾರು ನಿಲುಗಡೆಯ ಮೇಲ್ಛಾವಣಿಗೆ ಕಾಂಕ್ರೀಟನ್ನು ಹಾಕಲು ಸಿದ್ದಪಿಡಸಿದ್ದ ಆಧಾರ ಸ್ಥಂಭಗಳು ಕುಸಿದು ಬಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಬ್ಬರು ಮೃತಪಟ್ಟಿರುತ್ತಾರೆ.

ಇ) ಸ್ಕಾಫೋಲ್ಡಿಂಗ್ ದೋಷದಿಂದ ಈ ಅಪಘಾತವು ಸಂಭವಿಸಿರುತ್ತದೆ.

ಈ) ಇಲ್ಲ.

ಉ) ಇಲ್ಲ.

ಊ) 1995ರ ಡಿಸೆಂಬರ್ ಮಾಹೆಯ ಅಂತ್ಯದೊಳಗೆ.

**ಅರಣ್ಯ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡದೆ ಇರುವ ಬಗ್ಗೆ.**

2252 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?